

# ಸಿದ್ದಿಖಿಯ ಖ್ಯಾತಿ



ನ್ಯೂಯಾರ್ಕ್‌ನಲ್ಲಿ ಐಫಾ ಸಿನಿಮಾ ಉತ್ಸವಕ್ಕೆ ಬಾಲಿವುಡ್‌ನಿಂದ ದೊಡ್ಡ ದಂಡೇ ಹೋಗಿದ್ದರೂ, ನವಾಜುದ್ದೀನ್ ಸಿದ್ದಿಖಿಗೆ ಸಿಕ್ಕಿದಷ್ಟು ಜನಪ್ರಿಯತೆ ಬೇರೆಯವರಿಗೆ ಸಿಕ್ಕಲಿಲ್ಲವಂತೆ. ಅಲ್ಲಿ ಸಿದ್ದಿಖಿಗೆ ದೊಡ್ಡದೊಂದು ಅಭಿಮಾನಿಗಳ ಬಳಗವೇ ಸೃಷ್ಟಿಯಾಗಿದೆಯಂತೆ. ಮುಂಬೈಯ ಏರ್‌ಪೋರ್ಟ್‌ನಲ್ಲಿ ವಿಮಾನ ಹಿಡಿಯಲು ಹೊರಟಾಗಲೂ ಸಿದ್ದಿಖಿ ಜತೆಗೆ ಸೆಲ್ಫೀ ತೆಗೆದುಕೊಳ್ಳಲು ಯುವಜನರ ದಂಡೇ ನೆರೆದಿತ್ತು.

ನೈಜ ನಟನೆಗೆ ಖ್ಯಾತಿ ಹೊಂದಿರುವ ಸಿದ್ದಿಖಿ ಈಗ ಬಿಡುವಿಲ್ಲದ ನಟ. ಆಗಸ್ಟ್ 25ಕ್ಕೆ 'ಬಾಬು ಮೋಶೈ ಬಂದೂಕ್‌ಬಾಜ್' ಚಿತ್ರ ಬಿಡುಗಡೆಯಾಗುತ್ತಿದೆ. ಈ ಹಿಂದೆ ಬಂದಿದ್ದ ಮುಂಬೈ ಭೂಗತ ಜಗತ್ತಿನ 'ಗ್ಯಾಂಗ್ಸ್ ಆಫ್ ವಾಸೇಪುರ್..' ಸರಣಿ ಚಿತ್ರಗಳನ್ನು ಹೋಲುವಂತೆಯೇ ಈ ಚಿತ್ರವೂ ಇದೆ. ಸಣ್ಣ ನಗರವೊಂದರ ಕಾಂಟ್ರಾಕ್ಟ್ ಕಿಲ್ಲರ್‌ನ ಕಥೆ. ಕುಶಾನ್ ನಂದಿ ನಿರ್ದೇಶನದ ಚಿತ್ರದಲ್ಲಿ ದಿವ್ಯಾ ದತ್ತಾ ಜತೆಗೆ ಸಿದ್ದಿಖಿ ನಟಿಸಿರುವ ಹಸಿ ಬಿಸಿ ದೃಶ್ಯಗಳು ಈಗಾಗಲೆ ಎಲ್ಲರ ಗಮನ ಸೆಳೆದಿವೆ.

ಖಳ ಇಮೇಜಿನ ಪಾತ್ರಗಳ ಬಗ್ಗೆ ಸಿದ್ದಿಖಿಗೆ ಅಂತಹ ಒಲವೇನೂ ಇಲ್ಲವಂತೆ. 'ಆದರೆ ಈಗೀಗ ಇಂತಹ ಪಾತ್ರಗಳಲ್ಲೇ ಬಹುತೇಕ ಹೀರೋಗಳು ನಟಿಸುತ್ತಿದ್ದಾರೆ. ನಟನೆಗೆ ಹೆಚ್ಚು ಅವಕಾಶ ಸಿಗುತ್ತದೆ ಎನ್ನುವುದೂ ಅದಕ್ಕೆ ಒಂದು ಕಾರಣ' ಎನ್ನುತ್ತಾನೆ 43ರ ಹರೆಯದ ಈ ರಾಷ್ಟ್ರಪ್ರಶಸ್ತಿ ವಿಜೇತ. ಅಂದ ಹಾಗೆ 'ಬಂದೂಕ್‌ಬಾಜ್'ನಲ್ಲಿ ದಿವ್ಯಾ ದತ್ತಾ ಜತೆಗೆ ಪ್ರಣಯ ದೃಶ್ಯಗಳಲ್ಲಿ ನಟಿಸುವಾಗ ಈತ ಸಾಕಷ್ಟು ಬೆವರಿದ್ದನಂತೆ. 'ಅದು ತಮಾಷೆಯಲ್ಲ ಸ್ವಾಮಿ, ನಟನೆಗೂ ಗಮನ ಕೊಡಬೇಕು, ಜತೆಗೆ ಬಿಸಿ ದೃಶ್ಯಗಳಿಂದಾಗಿ ಗಮನ ಬೇರೆಡೆಗೆ ಹರಿಯಬಾರದು' ಎಂದು ಮುಗ್ಧವಾಗಿ ನಗುತ್ತಾನೆ!

ಮಹಿಳಾಪ್ರಧಾನ ಚಿತ್ರಗಳ ಬಗ್ಗೆ ಸಿದ್ದಿಖಿಗೆ ಒಳ್ಳೆಯ ಅಭಿಪ್ರಾಯವಿದೆ. 'ಅಭಿನಯಕ್ಕೆ ಒತ್ತು ಇರುವ ಅಂತಹ ಚಿತ್ರಗಳು ಹೆಚ್ಚು ಬಂದರೆ ಒಳ್ಳೆಯದೇ' ಎನ್ನುತ್ತಾನೆ. 'ಮಾಮ್' ಚಿತ್ರದಲ್ಲಿ ಶ್ರೀದೇವಿ ಜತೆಗೆ, 'ಕಹಾನಿ' ಚಿತ್ರದಲ್ಲಿ ವಿದ್ಯಾ ಬಾಲನ್ ಜತೆಗೆ ನಟಿಸಿದ ಅನುಭವ ಸಿದ್ದಿಖಿಗೆ ಸಾಕಷ್ಟು ಖುಷಿ ಕೊಟ್ಟಿದೆ. ಟೈಗರ್ ಶ್ರಾಫ್ ಜತೆಗೆ 'ಮುನ್ನಾ ಮೈಕೆಲ್'ನಲ್ಲಿ ಡ್ಯಾನ್ಸ್ ಮಾಡಿದ್ದು ಇನ್ನೊಂದು ವಿಶಿಷ್ಟ ಅನುಭವ. ಈ ಮಧ್ಯೆ ಖ್ಯಾತ ಕಥೆಗಾರ ಸಾದಾತ್ ಹಸನ್ ಮಾಂಟೊ ಜೀವನಚಿತ್ರ ಆಧಾರಿತ ನಂದಿತಾದಾಸ್ ನಿರ್ದೇಶನದ ಚಿತ್ರಕ್ಕೂ ಸಿದ್ದಿಖಿ ಹೀರೊ ಆಗಿ ಆಯ್ಕೆಯಾಗಿದ್ದಾನೆ.



# ಅನೂಷ್ಕಾ ಶೆಟ್ಟಿಯ ಬೆನ್ನು

'ಬಾಹುಬಲಿ–2' ಯಶಸ್ಸಿನ ಬಳಿಕ ಬಾಲಿವುಡ್‌ನಲ್ಲೂ ಸಾಕಷ್ಟು ಬೇಡಿಕೆ ಕುದುರಿಸಿಕೊಂಡಿರುವ ತೆಲುಗು ಚಿತ್ರರಂಗದ ಬಹುಬೇಡಿಕೆಯ ನಟಿ ಅನೂಷ್ಕಾ ಶೆಟ್ಟಿ, ಇದೀಗ ಹೊಸ ಹಿಂದಿ ಚಿತ್ರದಲ್ಲಿ ಪ್ರಭಾಸ್ ಜತೆಗೇ ನಟಿಸುವುದು ಖಾತ್ರಿಯಾಗಿದೆ.

ಪ್ರಭಾಸ್ ನಟಿಸಲಿರುವ ಹಿಂದಿ ಚಿತ್ರ 'ಸಾಹೂ'ನಲ್ಲಿ ಮೊದಲು ಕತ್ರೀನಾ ಕೈಫ್ ನಾಯಕಿ ಆಗುವ ಸುದ್ದಿ ಹಬ್ಬಿತ್ತು. ಆದರೆ ಬಾಹುಬಲಿ–2 ಹಿಂದಿಯಲ್ಲೂ ದಾಖಲೆ ಕಲೆಕ್ಷನ್ ಮಾಡಿರುವ ಹಿನ್ನೆಲೆಯಲ್ಲಿ ಅನೂಷ್ಕಾ ಶೆಟ್ಟಿಯನ್ನೇ ನಾಯಕಿಯನ್ನಾಗಿ ಮಾಡಲು ನಿರ್ಮಾಪಕರು ಬಯಸಿದ್ದಾರೆ. ಅನೂಷ್ಕಾ ಒಪ್ಪಿಯೂ ಆಗಿದೆ. ತೆಲುಗು, ತಮಿಳು, ಹಿಂದಿ ಈ ಮೂರೂ ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದ್ದು, ಅನೂಷ್ಕಾ ಮತ್ತು ಪ್ರಭಾಸ್ ಚಿತ್ರಕ್ಕಾಗಿಯೇ ಹಿಂದಿ ಕಲಿಯಲು ಶುರು ಮಾಡಿದ್ದಾರಂತೆ. ಇಬ್ಬರೂ ಸ್ವತಃ ಡಬ್ಬಿಂಗ್ ನಡೆಸಲಿದ್ದಾರೆ. 'ಸಾಹೂ' ಚಿತ್ರದಲ್ಲಿ ಆಧುನಿಕ ವೇಷಭೂಷಣಗಳಲ್ಲಿ ಇಬ್ಬರೂ ಕಾಣಿಸಲಿದ್ದಾರೆ. ಬಹುತೇಕ ಚಿತ್ರಗಳಲ್ಲಿ ಬೆನ್ನು ತೋರಿಸುವ ಮೂಲಕ ಅಭಿಮಾನಿಗಳ ಹಾಟ್ ಎನ್ನಿಸಿಕೊಂಡಿರುವ ಅನೂಷ್ಕಾ ಶೆಟ್ಟಿಗೆ, ಈ ಚಿತ್ರದಲ್ಲೂ ಅಂತಹದ್ದೇ ನೃತ್ಯವೊಂದನ್ನು ಸಂಗೀತ ನಿರ್ದೇಶಕರು ನೀಡಿದ್ದಾರಂತೆ!

ವಾಸ್ತವವಾಗಿ ಅನೂಷ್ಕಾ ಶೆಟ್ಟಿ ಈ ಹಿಂದೆಯೇ ಹಿಂದಿಯ 'ಸಿಂಗಂ' ಚಿತ್ರದಲ್ಲಿ ನಟಿಸಬೇಕಿತ್ತು. ಆಗ ಈಕೆಯನ್ನು ಸಂಪರ್ಕಿಸಿದಾಗ ಸಂಭಾವನೆಯ ವಿಚಾರದಲ್ಲಿ ಸಮಾಧಾನ ಇಲ್ಲದ್ದರಿಂದ ಈಕೆ ಒಪ್ಪಿರಲಿಲ್ಲ. ಇತ್ತೀಚೆಗೆ ಇ.ನಿವಾಸ್ ನಿರ್ದೇಶನದ ಹಿಂದಿ ಚಿತ್ರವೊಂದರಲ್ಲೂ ಅನೂಷ್ಕಾ ನಟಿಸುವುದಾಗಿ ಸುದ್ದಿ ಹಬ್ಬಿತ್ತು. ಆ ಬಳಿಕ ಸ್ವತಃ ನಿರ್ದೇಶಕರು ಸ್ಪಷ್ಟನೆ ನೀಡಿ, ಚಿತ್ರಕಥೆ ಈಕೆಗೆ ಹೊಂದಿಕೆ ಆಗುವುದಿಲ್ಲ, ಗ್ಲಾಮರ್ ಹೆಚ್ಚಾಯಿತು ಎಂದು ಹೇಳಿದ್ದುಂಟು. ಈಗ ಅನೂಷ್ಕಾ ತನ್ನ ನಿಕಟ ಗೆಳೆಯ ಪ್ರಭಾಸ್ ಚಿತ್ರದಲ್ಲೇ ಹೀರೋಯಿನ್ ಆಗಿ ಹಿಂದಿಯಲ್ಲೂ ನಟಿಸುತ್ತಿರುವುದಕ್ಕೆ ಹೆಚ್ಚು ಖುಷಿ ಪಡುತ್ತಿದ್ದಾಳೆ. ಅಂದ ಹಾಗೆ ಈಕೆ ಪ್ರಭಾಸ್ ಜತೆಗೆ ಮದುವೆ ಆಗಲಿದ್ದಾರೆ ಎಂಬ ಸುದ್ದಿಯಂತೂ ಸದ್ಯಕ್ಕೆ ತಣ್ಣಗಾಗಿದೆ.

■ ಬಿಂದು